## ಅಪಹಾಸ್ಯ ತರವಲ್ಲ

ಕಲರ್ಸ್ ಕನ್ನಡದಲ್ಲಿ ಸೃಜನ್ ಲೋಕೇಶ್ ಅವರ 'ಮಜಾ ಟಾಕಿಸ್' ಮತ್ತೆ ಆರಂಭವಾಗಿದೆ. ಅವರಿಗೆ ತಾನು ನುಡಿಯುವ ಪದಗಳೆಲ್ಲ ನಗು ಬರಿಸುತ್ತದೆ ಎಂಬ ಭ್ರಮೆ ಇದೆ. ಅವರ ಮಾತಿಗೆ ನಕ್ಕರೂ ಅದಕ್ಕೆ ಅರೆ ಬೆಂದ ಅರಿವು ಕಾರಣ. ತಾವೊಬ್ಬರೇ ಅಪ್ರತಿಮ ಕಲಾವಿದ ಮತ್ತು ಅಲ್ಲಿ ಭಾಗವಹಿಸಿರುವ ಇತರರು ಇವರ ಆಸ್ಥಾನದ ಸೇವಕರು ಎಂಬಂತೆ ನಡೆದುಕೊಳ್ಳುತ್ತಾರೆ. ಅವರ ನುಡಿ ಭಾಷೆ ಮತ್ತು ದೇಹ ಭಾಷೆ ಹಾಸ್ಯಕ್ಕಿಂತ ಅಪಹಾಸ್ಯವನ್ನು ತೋರಿಸುತ್ತದೆ.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಮಾಧ್ಯಮ ಮತ್ತು ಸಂವೇದನಾಶೀಲತೆ

ಪ್ರಖ್ಯಾತ ಗಾಯಕ ಬಾಲಸುಬ್ರಹ್ಮಣ್ಯಂ ಮರಣವನ್ನಪ್ಪಿದಾಗ ಟೀವಿ ಚಾನಲ್‌ಗಳು ಪಾರ್ಥಿವ ಶರೀರದ ದೃಶ್ಯವನ್ನು ಅಂತ್ಯಸಂಸ್ಕಾರದವರೆಗೂ, ಸುಮಾರು ಇಪ್ಪತ್ತುನಾಲ್ಕು ಗಂಟೆಗಳ ಕಾಲ ನಿರಂತರವಾಗಿ ಪ್ರದರ್ಶಿಸಿದವು. ಪಾರ್ಥಿವ ಶರೀರದ ದೃಶ್ಯ ನೋಡುಗರ ಮನಸ್ಸನ್ನು ಗಾಸಿಗೊಳಿಸಿ ನೋವುಂಟುಮಾಡುತ್ತದೆ. ಇದು ಸದಾ ಹಸನ್ಮುಖಿದಿಂದ ಶೋಭಾಯಮಾನರಾಗಿರುತ್ತಿದ್ದ ಎಸ್‌ಪಿಬಿ ಅವರಿಗೆ ಎಸಗಿದ ಅಪಚಾರವೇ ಸರಿ. ಮರಣವನ್ನಪ್ಪಿದವರಿಗೆ ಶ್ರದ್ಧಾಂಜಲಿಯನ್ನು ತೋರಿಸಲು ಅನೇಕ ಮಾರ್ಗಗಳಿವೆ. ಅವರ ಸಾಧನೆ, ಜನಪ್ರಿಯತೆ, ಅವರ ಅಗಲಿಕೆಯಿಂದ ಅಭಿಮಾನಿಗಳಿಗೆ ಉಂಟಾಗಿರುವ ದುಃಖ ಮುಂತಾದವುಗಳನ್ನು ಬಿಂಬಿಸಲು ಅವರು ಜೀವಂತರಾಗಿದ್ದಾಗಿನ ಚಿತ್ರಗಳನ್ನು ಬಳಸಿಕೊಳ್ಳುವುದು ಒಳ್ಳೆಯದು. ಪಾರ್ಥಿವ ಶರೀರದ ಪ್ರದರ್ಶನದಿಂದ ದಿವಂಗತರ ಹಾಗೂ ಅವರ ಕುಟುಂಬವರ್ಗದ ಖಾಸಗೀತನಕ್ಕೆ ಧಕ್ಕೆ ಉಂಟಾಗುತ್ತದೆ. ಮಾಧ್ಯಮಗಳ ಈ ಕಾರ್ಯಶೈಲಿ ಸಂವೇದನಾಶೀಲತೆಯನ್ನು ಪ್ರಶ್ನಿಸುವಂತೆ ಮಾಡಿದೆ.

—ಎಚ್.ಎಸ್. ಶ್ರೀಮತಿ

## ಅವಮಾನವೋ ಸನ್ಮಾನವೋ

ಮಹಾನ್ ಗಾಯಕ ಎಸ್‌ಪಿಬಿ ಸಾವು ನಿಜವಾಗಿಯೂ ತುಂಬಲಾರದ ನಷ್ಟ. ಹಾಗಂತ ಅದನ್ನೇ ಎಷ್ಟು ಅಂತ ವೈಭವೀಕರಿಸುವುದು? ಸತ್ತ ವ್ಯಕ್ತಿಯ ಗುಣಗಾನ ಮಾಡುವುದು ಸಂಪ್ರದಾಯ. ಆದರೆ ಕೆಲವು ವಾರ್ತಾವಾಹಿನಿಯಲ್ಲಿ 'ಕುಡಿಯುತ್ತಿದ್ದರು – ಧೂಮಪಾನ ಮಾಡುತ್ತಿದ್ದರು. ಆದರೂ ಮಹಾನ್ ಗಾಯಕ ಹೇಗಾದರು ಆ ಕಥೆ ಹೇಳ್ತೀವಿ ಕೇಳಿ' ಅಂತೆಲ್ಲ ಕಾರ್ಯಕ್ರಮ ಮಾಡಿದರು. ದಿನವೆಲ್ಲ ಹೇಳಿದ್ದನ್ನೇ ಹೇಳಿ ತಲೆ ಚಿಟ್ಟು ಹಿಡಿಸುವುದು ಯಾವ ನ್ಯಾಯ? ಇದು ಮಹಾನ್ ಚೇತನಕ್ಕೆ ಮಾಡುವ ಸನ್ಮಾನವೋ ಅವಮಾನವೋ?

—ಶೈಲಜಾ ಜೋಶಿ, ಹುಲಕೋಟಿ

ವಾರದ ಪತ್ರ

## ಕಾಗುಣಿತ ದೋಷ ನುಸುಳದಿರಲಿ

ಪ್ರಸ್ತುತ ಕೋವಿಡ್ ಸಂದಿಗ್ಧ ಪರಿಸ್ಥಿತಿಯಲ್ಲಿ ಚಂದನ ವಾಹಿನಿಯು 'ಸಂವೇದ' ನೇರಪ್ರಸಾರ ಪಾಠಗಳನ್ನು ವಿವಿಧ ತರಗತಿಗಳಿಗಾಗಿ ಹಮ್ಮಿಕೊಂಡಿರುವುದು ಶ್ಲಾಘನೀಯ. ಅಂತೆಯೇ ಚಂದನದ ಪ್ರತೀ ಕಾರ್ಯಕ್ರಮಗಳೂ ಅಚ್ಚುಕಟ್ಟಾಗಿವೆ. ಆದರೆ ಈ ತರಗತಿಗಳಲ್ಲಿ ಕೆಲವೊಂದು ಅಕ್ಷರ ನ್ಯೂನತೆಗಳು ಗೋಚರಿಸುತ್ತಿವೆ. ಇತ್ತೀಚಿನ ತರಗತಿ 8ರ ಸಮಾಜ ವಿಜ್ಞಾನ ವಿಷಯದಲ್ಲಿ 'ಕಣಶಿಲೆಗಳಲ್ಲಿ 3 ವಿಧಗಳು' ಎಂದಿರುವ ವಾಕ್ಯದಲ್ಲಿ 'ವಿದಗಳು' ತಪ್ಪಕ್ಷರವಿದೆ. ಅದೇ ರೀತಿ ಸೆ.21ರ 9ನೇ ತರಗತಿಯ ಸಮಾಜವಿಜ್ಞಾನ ವಿಷಯದಲ್ಲಿ 'ಆಚರಿಸುತ್ತಿತ್ತು' ಎನ್ನುವುದು 'ಆಚರಿಸುತ್ತಿತು' ಎಂದಾಗಿತ್ತು. ಸೆ. 24ರ 9ನೇ ತರಗತಿಯ ವಿಜ್ಞಾನ ವಿಷಯದಲ್ಲಿ 'ಪೊಟ್ಯಾಸಿಯಂ'ನ್ನು 'ಪೋಟ್ಯಾಸಿಯಂ' ಎಂದು ಬರೆಯಲಾಗಿತ್ತು. ಮಕ್ಕಳಿಗೆ ಹೇಳಿಕೊಡಬೇಕಾದ ವಿಷಯಗಳಲ್ಲಿ ಕಾಗುಣಿತವೂ ಸೇರಿದಂತೆ ಯಾವುದೇ ತಪ್ಪು ನುಸುಳದಂತೆ ಜಾಗ್ರತೆವಹಿಸಲೇಬೇಕು.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

## ಪದಬಂಧ ಕಣ್ಮರೆ

ದೂರದರ್ಶನ 'ಚಂದನ'ದಲ್ಲಿ ಪ್ರಸಾರವಾಗುತ್ತಿರುವ 'ಥಟ್ ಅಂತ ಹೇಳಿ' ಜನಪ್ರಿಯ ಕ್ವಿಜ್ ಕಾರ್ಯಕ್ರಮ ಈಗ ಆನ್‌ಲೈನ್‌ನಲ್ಲಿ ಪ್ರಸಾರ ಮಾಡುತ್ತಿರುವುದು ಬಹಳ ಒಳ್ಳೆಯ ಕೆಲಸ. ಆದರೆ ಮೊದಲು ಕೇಳುತ್ತಿದ್ದ ಪದಬಂಧ, ಲೆಕ್ಕ ಮುಂತಾದ ಪ್ರಶ್ನೆಗಳನ್ನು ಈಗ ಕೇಳುತ್ತಿಲ್ಲ. ಈಗ ಚಲನಚಿತ್ರದ ಹಾಡುಗಳ ಮಧ್ಯಭಾಗದ ಸಾಲುಗಳನ್ನು ತೋರಿಸಿ ಈ ಹಾಡು ಯಾವ ಚಿತ್ರದ್ದು ಎಂದು ಕೇಳುತ್ತಾರೆ. ಇಂಥ ಹಾಡುಗಳಿಂದ ಜ್ಞಾನಾರ್ಜನೆಯು ಆಗುವುದಿಲ್ಲ. ಅದರ ಬದಲು ಉತ್ತಮ ಗುಣಮಟ್ಟದ ಪ್ರಶ್ನೆ ಕೇಳಿದರೆ ಚಂದನ ವಾಹಿನಿಯ ಘನತೆ ಗೌರವಗಳು ಇನ್ನೂ ಹೆಚ್ಚುತ್ತದೆ ಎಂದು ನಮ್ಮ ಅನಿಸಿಕೆ.

—ಜಯಲಕ್ಷ್ಮಿ ಉಪಾಧ್ಯಾಯ, ಬೆಂಗಳೂರು

## ಬೇಕು ಧಾರಾವಾಹಿಗಳಿಗೆ ಕಾಲಮಿತಿ

ಕನ್ನಡ ಧಾರವಾಹಿಗಳು ವರ್ಷಗಳ ಕಾಲ ಮುಂದುವರೆಯುವುದನ್ನು ನೋಡಿದರೆ ಅವುಗಳಿಗೆ ಕಾಲಮಿತಿಯನ್ನು ನಿಗದಿ ಪಡಿಸುವುದು ಅವಶ್ಯಕವಾಗಿದೆ. ಅಲ್ಲದೆ ಅವುಗಳನ್ನು ವಿಭಾಗೀಯ ಸೆನ್ಸರ್ ಬೋರ್ಡ್ ನಿಯಂತ್ರಣಕ್ಕೆ ಒಳಪಡಿಸಬೇಕು. ಖಾಸಗಿ ಚಾನಲ್‌ಗಳು ಇಲ್ಲದ ಎಂಬತ್ತರ ದಶಕದಲ್ಲಿ ಧಾರಾವಾಹಿಗಳಿಗೆ 13, 26 ,39 ಹೆಚ್ಚೆಂದರೆ 52 ಎಪಿಸೋಡ್‌ಗಳ ಅನುಮತಿ ಮಾತ್ರ ದೊರೆಯುತ್ತಿತ್ತು. ರಾಮಾಯಣ ಮತ್ತು ಮಹಾಭಾರತದಂತಹ ಮಹಾಕಾವ್ಯಗಳ ಧಾರಾವಾಹಿಗಳಿಗೆ ಕೇವಲ 52 ಎಪಿಸೋಡ್ ಗಳ ಅವಧಿ ಮಾತ್ರ ದೊರೆಯುತ್ತಿತ್ತು. ಒಂದು ಗಂಟೆಯ 52 ಎಪಿಸೋಡ್‌ಗಳಲ್ಲಿ ಇಡೀ ಮಹಾಭಾರತವನ್ನೇ ತೋರಿಸಲು ಸಾಧ್ಯವಾಗಿರುವಾಗ ಸಾಮಾನ್ಯ ಕಥೆಯ ಇವುಗಳಿಗೆ ಅರ್ಧ ಗಂಟೆಯ 250 ಎಪಿಸೋಡ್ ಸಾಕಲ್ಲವೆ?

—ಮುರಲೀಧರ ಕುಲಕರ್ಣಿ, ಬೀದರ್

## ಸಹಜತೆಯಿಂದ ದೂರ

ಕಲರ್ಸ್ ಕನ್ನಡದ 'ಕನ್ನಡತಿ'ಯಲ್ಲಿ ನಾಯಕಿ ಭುವಿ ಮತ್ತು ಹರ್ಷ (ರಂಜನಿ ರಾಘವನ್– ಕಿರಣ್‌ರಾಜ್) ಇಬ್ಬರನ್ನೂ ಶತ್ರುಗಳು ವಾಹನವೊಂದರಲ್ಲಿ ಕೈಕಟ್ಟಿ ಹಾಕಿ ಲಾಕ್ ಮಾಡಿ ಹೊರಗೆ ಹೋಗಿರುತ್ತಾರೆ.

ಇವರೀರ್ವರೂ ಬಿಡಿಸಿಕೊಂಡು ಹೊರಬರಲು ಹರಸಾಹಸ ಪಡುತ್ತಾರೆ. ಹರ್ಷ ವಾಹನ ಮಧ್ಯಭಾಗದ ಆಸನಕ್ಕೂ ಹಾರುತ್ತಾನೆ. ಆದರೂ ಕಾರಿನ ಬಾಗಿಲು ತೆರೆಯಲು ಆಗುವುದಿಲ್ಲ.

ಲಾಕ್ ಮಾಡಿರುವ ಕಾರಿನ ಬಾಗಿಲನ್ನು ಹೊರಭಾಗದಿಂದ ತೆರೆಯಲಾಗದು, ಆದರೆ ಒಳಭಾಗದಿಂದ ಸುಲಭವಾಗಿ ತೆರೆಯಬಹುದು. ಪೊಲೀಸರು ವಾಹನದ ಬಾಗಿಲನ್ನು ಕೀ ಇಲ್ಲದೆಯೇ ತೆರೆದಿದ್ದು ಹೇಗೆ?

—ಪತ್ತಂಗಿ ಎಸ್. ಮುರಳಿ, ಬೆಂಗಳೂರು

## ಇಂಗ್ಲಿಷ್ ಹೆಸರಿನ ಹೊಸವಾಹಿನಿ

ಕನ್ನಡ ಸುದ್ದಿವಾಹಿನಿಗಳ ಪಟ್ಟಿಗೆ ಇನ್ನೊಂದು ಇಂಗ್ಲಿಷ್ ಹೆಸರಿನ ಸುದ್ದಿವಾಹಿನಿ (ಫಸ್ಟ್ ನ್ಯೂಸ್) ಇತ್ತೀಚೆಗೆ ಸೇರಿದೆ. ಕನ್ನಡದ ಬಹುತೇಕ ಸುದ್ದಿ ವಾಹಿನಿಗಳಿಗೆ ಇಂಗ್ಲಿಷ್ ಹೆಸರಿರುವುದು ಅಲಿಖಿತ ಟ್ರೆಂಡ್ ಎನ್ನುವುದು ಹಳೆಯ ಕಥೆ. ಹಲವು ವಾಹಿನಿಗಳಿಗ ಲೋಗೊದಲ್ಲಿ ಪೂರ್ಣ ಇಂಗ್ಲಿಷ್ ಇದ್ದರೆ ಕೆಲವು ಅರ್ಧ ಕನ್ನಡ ಇನ್ನರ್ಧ ಇಂಗ್ಲಿಷ್ ಹೊಂದಿವೆ. ಈ ಸುದ್ದಿವಾಹಿನಿಗೆ ಕನ್ನಡದಲ್ಲಿ ಒಂದು ಮುದ್ದಾದ ಹೆಸರು ದೊರಕದಿರುವುದು ತೀರಾ ಆಶ್ಚರ್ಯ. ಬೆಂಗಳೂರಿನಲ್ಲಿ ಅಂಗಡಿ ಮುಂಗಟ್ಟುಗಳಲ್ಲಿ ಕನ್ನಡದಲ್ಲಿ ನಾಮಫಲಕ ಹಾಕಿದರೆ, ಕನ್ನಡದಲ್ಲಿ ಮಾತನಾಡಿದರೆ ಗಿರಾಕಿಗಳು ಬರುವದಿಲ್ಲವಂತೆ! ಅದೇ ರೀತಿ ಕನ್ನಡ ಸುದ್ದಿವಾಹಿಗಳಿಗೆ ಕನ್ನಡದ ಹೆಸರು ಇಟ್ಟರೆ ವೀಕ್ಷಕರು ದೊರೆಯುವದಿಲ್ಲವೇನೋ?

—ರಮಾನಂದ ಶರ್ಮಾ, ಬೆಂಗಳೂರು